## ಫೆಬ್ರವರಿ 2023 ಭಾರತದ ಪಾಮೆಣ್ಣೆ ಆಮದು 8 ತಿಂಗಳ ಕನಿಷ್ಠ ಮಟ್ಟಕ್ಕೆಳಿಕೆ

ಫೆಬ್ರವರಿ 2023 ರಲ್ಲಿ ಭಾರತದ ಪಾಮೆಣ್ಣೆ ಆಮದು ಜನವರಿಯದಕ್ಕಿಂತ 30 ಶೇಕಡಾ ಇಳಿಕೆಯೊಂದಿಗೆ ಹಿಂದಿನ 8 ತಿಂಗಳ ಕನಿಷ್ಠ ಮಟ್ಟಕ್ಕಿಳಿದಿದೆಯೆನ್ನಲಾಗಿದೆ. 586007 ಟನ್ ಪಾಮೆಣ್ಣೆ ಫೆಬ್ರವರಿಯಲ್ಲಿ ಆಮದಾಗಿದೆಯೆನ್ನಲಾಗಿದೆ. ನವೆಂಬರ್‌ನಿಂದ ಜನವರಿ ಅವಧಿಯ ಅಧಿಕ ಆಮದಿನಿಂದ ದಾಸ್ತಾನು ಹೆಚ್ಚಳವಿದ್ದುದರಿಂದ ಫೆಬ್ರವರಿಯಲ್ಲಿ ಆಮದು ಇಳಿಕೆಯಾಗಿದೆಯೆನ್ನಲಾಗಿದೆ. ಫೆಬ್ರವರಿಯಲ್ಲಿ ಸೋಯಾಬೀನ್ ಎಣ್ಣೆ ಆಮದು 3 ಶೇಕಡಾ ಇಳಿಕೆಯೊಂದಿಗೆ 355,840 ಟನ್‌ಗಳಾಗಿದೆಯೆನ್ನಲಾಗಿದೆ. ಸೂರ್ಯಕಾಂತಿ ಎಣ್ಣೆ ಆಮದು 66 ಶೇಕಡಾ ಇಳಿಕೆಯೊಂದಿಗೆ 156,628 ಟನ್‌ಗಳಾಗಿದೆಯೆನ್ನಲಾಗಿದೆ. ಮಾರ್ಚ್ ತಿಂಗಳ ಭಾರತದ ಪಾಮೆಣ್ಣೆ ಆಮದು 8 ಲಕ್ಷ ಟನ್ ಮೀರಲಾರದೆನ್ನಲಾಗಿದೆ. ಫೆಬ್ರವರಿಯ ಆಮದು ಇಳಿಕೆಯ ಹೊರತಾಗಿಯೂ ಖಾದ್ಯತೈಲ ದಾಸ್ತಾನು ವರ್ಷ ಹಿಂದಿನ ಅವಧಿಯಲ್ಲಿದ್ದುದರಿಂದ ಇಮ್ಮಡಿಯಾಗಿ 3.4 ಮಿಲಿಯನ್ ಟನ್‌ಗಳಾಗಿದೆಯೆನ್ನಲಾಗಿದೆ.

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಅಧಿಕ ಬೇಡಿಕೆಯಿಂದ 35 ರಿಂಗಿಟ್ಸ್ 0.88 ಶೇಕಡಾ ಹೆಚ್ಚಳವಾಗಿ 4017 ರಿಂಗಿಟ್ಸ್ ( $898.86 ) ಆಗಿದೆಯೆನ್ನಲಾಗಿದೆ.

## ಗೋಧಿ,_ ಜೋಳ ಜಾಗತಿಕ ದರ ಇಳಿಕೆ

ವರ್ಲ್ಡ್ ಬ್ಯಾಂಕ್ ವರದಿಯನ್ವಯ ಗೋಧಿ, ಜೋಳ ಹಾಗೂ ಅಕ್ಕಿ ಜಾಗತಿಕ ದರಗಳು ಹಿಂದಿನ 2 ವಾರಗಳಿಂದ ಇಳಿಕೆಯಾಗಿದೆಯೆನ್ನಲಾಗಿದೆ. ಜೋಳ 6 ಶೇಕಡಾ ಗೋಧಿ 7 ಶೇಕಡಾ ಹಾಗೂ ಅಕ್ಕಿ ದರಗಳು 2 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ.

## ದೇಶೀ ಮಾರುಕಟ್ಟೆಗಳಲ್ಲಿ ಗೋಧಿ,_ ಜೋಳ ದರ ಇಳಿಕೆ

ಮಧ್ಯಪ್ರದೇಶದ ಕೋಟಾ ಮಾರುಕಟ್ಟೆಯಲ್ಲಿ ಅಧಿಕ ಆವಕದಿಂದ ಗೋಧಿ ದರ ಇಳಿಕೆಯಾಗಿದೆಯೆನ್ನಲಾಗಿದೆ. ಇಂದೋರ್‌ನಲ್ಲೂ ಗೋಧಿ ದರ ಇಳಿಕೆ ಕಂಡಿದೆಯೆನ್ನಲಾಗಿದೆ. ದಾವಣಗೆರೆಯಲ್ಲಿ ಮಂದಗತಿಯ ಬೇಡಿಕೆಯಿಂದ ಜೋಳ ದರ ಇಳಿಕೆಯಾಗಿದೆಯೆನ್ನಲಾಗಿದೆ. ಹೊಸಬೆಳೆಯ ಆದಕ ದಾವಣಗೆರೆ ಮಾರುಕಟ್ಟೆಗೆ ಆರಂಭವಾಗಿದೆಯೆನ್ನಲಾಗಿದೆ. ಬಿಹಾರದ ಪುರ್ನಿಯಾ ಮಾರುಕಟ್ಟೆಯಲ್ಲಿ ಜೋಳ ದರ ಅಲ್ಪ ಇಳಿಕೆಯಾಗಿದೆಯೆನ್ನಲಾಗಿದೆ.

## ಭಾರತದಲ್ಲಿ ಭತ್ತ ಖರೀದಿ ಹಿಂದಿನ ವರ್ಷದ 592 ಲಕ್ಷಟನ್‌ಗಳಾಗುವ ಸಾಧ್ಯತೆ

ಖಾರೀಫ್ ಬೆಳೆಯಲ್ಲಿ ಭತ್ತ ಉತ್ಪಾದನೆ ಇಳಿಕೆಯ ಹೊರತಾಗಿಯೂ ಸರಕಾರಿ ಖರೀದಿ ಏಜೆನ್ಸಿ ಎಫ್‌ಸಿಐಯ ಭತ್ತ ಖರೀದಿ ಹಿಂದಿನ ವರ್ಷದ ಖರೀದಿಯಾದ 592 ಲಕ್ಷಟನ್‌ಗಳಾಗಬಹುದೆಂದು ಎಫ್‌ಸಿಐಯ ಅಧ್ಯಕ್ಷ ಮತ್ತು ಎಂಡಿ ಅಶೋಕ್ ಕೆ ಮೀನಾ ಹೇಳಿದ್ದಾರೆನ್ನಲಾಗಿದೆ.

## ಬಟಾಟೆ ದರ ಸ್ಥಿರತೆಗೆ ಉತ್ತರ ಪ್ರದೇಶ ಯೋಜನೆ

ಬಟಾಟೆ ದರ ಕುಸಿತ ತಡೆಯಲು ಹಾಗೂ ರೈತರಿಗೆ ಯೋಗ್ಯ ದರ ದೊರಕಲು ಹಾಗೂ ಸ್ಥಿರತೆ ಕಾಯ್ದುಕೊಳ್ಳಲು ಸರಕಾರ ವಿವಿಧ ಯೋಜನೆ ಹಾಗೂ ಕ್ರಮಗಳನ್ನು ಕೈಗೊಳ್ಳುತ್ತಿದೆಯೆನ್ನಲಾಗಿದೆ. ಖರೀದಿ, ದಾಸ್ತಾನು (ಶೈತಾಗಾರ) ಇತರ ರಾಜ್ಯಗಳಿಗೆ ರವಾನೆ ಹಾಗೂ ರಫ್ತು ಮುಂತಾದ ಹಲವು ಕ್ರಮಗಳನ್ನು ಕೈಗೊಳ್ಳಲಾಗುವುದೆನ್ನಲಾಗಿದೆ.